ಪಿ.ಡಬ್ಲ್ಯೂ ಃ **1**

ಸಾಕ್ಷಿಗೆ ದಿನಾಂಕಃ **05.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಎದುರುದಾರರ ಪರ**:**

ನಾನು **10** ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನಮ್ಮ ಕುಟುಂಬದ ವಂಶವೃಕ್ಷದ ದೃಢೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಪ್ರಸ್ತುತವಾಗಿ ಕೆಂಗೇರಿಯಲ್ಲಿ ವಾಸವಿರುತ್ತೇನೆ. **1** ನೇ ಅರ್ಜಿದಾರರು ಮಿಕ್ಕಿರೆ ಗ್ರಾಮದಲ್ಲಿ ವಾಸವಿರುತ್ತಾರೆ. ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತೇನೆ. **3** ನೇ ಅರ್ಜಿದಾರರು ಮಾತ್ರ ಕೆಲಸಕ್ಕೆ ಹೋಗುತ್ತಾರೆ. **1** ನೇ ಅರ್ಜಿದಾರರು ಸ್ವತಂತ್ರವಾಗಿ ವಾಸವಿರುತ್ತಾರೆ ಎಂದರೆ ಸರಿ. ನಾನು ಮತ್ತು **3** ನೇ ಅರ್ಜಿದಾರರು ಬೇರೆಯವರ ಆದಾಯಕ್ಕೆ ಅವಲಂಬಿತವಾಗಿಲ್ಲ ಎಂದರೆ ಸರಿ. **1** ನೇ ಅರ್ಜಿದಾರರು ಬೇರೆಯವರ ಆದಾಯಕ್ಕೆ ಅವಲಂಬಿತರಾಗಿಲ್ಲ ಎಂದರೆ ಸರಿ. **4** ನೇ ಅರ್ಜಿದಾರರು ಕೆಲಸಕ್ಕೆ ಹೋಗಿ ಸಂಪಾದನೆ ಮಾಡುತ್ತಾರೆ ಎಂದರೆ ಸರಿ. ಆದ್ದರಿಂದ **4** ನೇ ಅರ್ಜಿದಾರರು ಸಹ ಬೇರೆಯವರ ಆದಾಯಕ್ಕೆ ಅವಲಂಬಿತರಾಗಿಲ್ಲ ಎಂದರೆ ಸರಿ.

**2.** ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ನಾನು ಹಾಜರಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ. ದೂರನ್ನು ಬೇರೆಯವರು ನೀಡಿರುತ್ತಾರೆ. ದೂರಿನಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಯಾವುದೋ ಅಪರಿಚಿತ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ದೂರಿನಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಶವ ತನಿಖಾ ವರದಿಯಲ್ಲಿ **1** ನೇ ಅರ್ಜಿದಾರರು ಮತ್ತು ಇತರರು ಅಪರಿಚಿತ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ. ಸ್ಥಳ ಮಹಜರ್ ನಲ್ಲಿ ಸಹ ಅದೇ ರೀತಿ ನಮೂದು ಮಾಡಲಾಗಿದೆ ಎಂದರೆ ಸರಿ. ಈ ಮೇಲೆ ಹೇಳಿದ ದಾಖಲೆಗಳ ಪ್ರಕಾರ ಅಪರಿಚಿತ ವಾಹನ ನನ್ನ ಪತಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಮೇಲೆ ಹೇಳಿದ ದಾಖಲೆಗಳ ಪ್ರಕಾರ ಕೆಎ**-41-9547** ನಂಬರ್ ನ ವಾಹನ ನನ್ನ ಪತಿಗೆ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಾಹನದಿಂದ ನನ್ನ ಪತಿಗೆ ಅಪಘಾತವಾಗದೇ ಇದ್ದರೂ ಸಹ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವು ಅಪಘಾತದಲ್ಲಿ ಭಾಗಿಯಾಗದೇ ಇದ್ದರೂ ಸಹ ನಾನು ಸುಳ್ಳು ಅರ್ಜಿ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನನಗೆ **1** ನೇ ಎದುರುದಾರರ ಪರಿಚಯವಿರುವುದಿಲ್ಲ**.** ಅಪರಿಚಿತ ವಾಹನ ಡಿಕ್ಕಿ ಪಡಿಸಿದ್ದರೂ ಸಹ ನಾನು**,** ಇತರೆ ಅರ್ಜಿದಾರರುಗಳು**, 1** ನೇ ಎದುರುದಾರರು ಮತ್ತು ಪೊಲೀಸರು ಸೇರಿ ಮೇಲೆ ಹೇಳಿದ ವಾಹನದಿಂದ ಅಪಘಾತವಾಗಿದೆ ಎಂದು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ**.** ಸದರಿ ವಾಹನವು ಅಪಘಾತದಲ್ಲಿ ಭಾಗಿಯಾಗದ ಕಾರಣ **2** ನೇ ಎದುರುದಾರ ಕಂಪನಿಯ ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ**.** ಪೊಲೀಸ್ ಅಧಿಕಾರಿಗಳು ಅಪಘಾತ ಪಡಿಸಿದ ವಾಹನವನ್ನು ಪತ್ತೆ ಹಚ್ಚಲು ತೆಗೆದುಕೊಂಡ ಕ್ರಮದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರಬಹುದು**.** ಅಪಘಾತ ಸ್ಥಳಕ್ಕೆ ನಾನು ಹೋಗಿರುವುದಿಲ್ಲ**.** ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ**.** ನಾನು ಮತ್ತು ಪೊಲೀಸರು ಸೃಷ್ಟಿ ಮಾಡಿ ನಿಪಿ **8** ನ್ನು ಹಾಜರುಪಡಿಸಿ**,** ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ**.** ನನ್ನ ಪತಿಗೆ ಅಪಘಾತ ಕಾಲಕ್ಕೆ **47** ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ್ ಕಾರ್ಡ್‌ನ್ನು ಹಾಜರುಪಡಿಸಿರುತ್ತೇನೆ**.** ಅವರಿಗೆ **50** ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿಯಲ್ಲ**.** ಅಂತ್ಯ ಸಂಸ್ಕಾರ ಮತ್ತು **11** ದಿನದ ಖರ್ಚಿಗೆ **2** ಲಕ್ಷ ರೂಪಾಯಿಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**.** ಮೃತನ ಆದಾಯಕ್ಕೆ ಸಂಬಂಧಿಸಿದಂತೆ ದಾಖಲೆಯಮನ್ನು ಹಾಜರುಪಡಿಸಿರುವುದಿಲ್ಲ**.** ನನ್ನ ಪತಿಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಅವರೇ ನೋಡಿಕೊಳ್ಳುತ್ತಿದ್ದರು**.** ಪರಿಹಾರ ಪಡೆದುಕೊಳ್ಳಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ**,** ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ**.**

ಮರುವಿಚಾರಣೆ ಇಲ್ಲ**.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**.**

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ**.**ಎ**.**ಸಿ**.**ಟಿ**.** ಮಳವಳ್ಳಿ**.**